SRI D. DEVARAJ URS.—Please pass on the details. I will see that immediate help is given.

Taking up Upper Krishna as a National Project.

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ನಮ್ಮ ಪ್ರಧಾನ ಮಂತ್ರಿಗಳು ಇಲ್ಲಿಗೆ ಬರತಕ್ಕ ಕಾಲದಲ್ಲಿ ಸರಕಾರದಲ್ಲಿ ನಾನು ಒತ್ತಾಯ ಮಾಡುವುದು ಎಂದರೆ ಅಪ್ಪರ್ ಕೃಷ್ಣ ಯೋಜನೆಯನ್ನು ನ್ಯಾಷನಲ್ ಪ್ರೊಜಕ್ಟ್ ಆಗಿ ತೆಗೆದುಕೊಳ್ಳಬೇಕೆಂದು ಅವರಲ್ಲಿ ಒತ್ತಾಯ ಮಾಡಬೇಕೆಂದು ಮತ್ತು ಪ್ರಧಾನಿಯವರು ಇಲ್ಲಿನ ಪರಿಸ್ಥಿತಿಯನ್ನು ನೋಡುವ ಸಂದರ್ಭದಲ್ಲಿ ಅವರ ಮೇಲೆ ಒತ್ತಡ ಹಾಕಿ ಇಂತಹ ಒಂದು ಘೋಷಣೆ ಮಾಡಿಸಬೇಕೆಂದು ನಾನು ಅವರಲ್ಲಿ ಸೂಚಿಸಲಿಚ್ಚಿಸುತ್ತೇನೆ.

2-30 P.M.

ಇನ್ನು ರೂಲ್ ೩೧೨ರ ಪ್ರಕಾರ.....

ಶ್ರೀ ವಾಟಾಳ್‌ನಾಗರಾಜ್.—ಸತ್ತವರ ಹೆಂಡತಿಗೆ ಪರಿಹಾರ ಕೊಡುವುದು ಒಳ್ಳೆದು ವಾದ ಆದರೆ ಬರಗಾಲದಿಂದ ಯಾರೂ ಸತ್ತಿಲ್ಲ ಎಂದು ವೇಲ್ಮನೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಇದು ಗುರುತರವಾದಪ್ರಶ್ನೆ. ಹೊಟ್ಟೆಗೆ ಅನ್ನ ಇಲ್ಲದೆ ಸಾಯುವವರು ಸಾಯಲಿ, ಉಳಿದವರಿಗೆ ಪರಿಹಾರ ಕೊಡುತ್ತೇವೆಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ತಾವು ಆ ರೀತಿ ಮಧ್ಯೆ ಮಾತನಾಡುವುದು ಸರಿಯಲ್ಲ. ಅವರು ಆ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ರಿಪೋರ್ಟ್ ತರಿಸುತ್ತೇನೆಂದು ಹೇಳಿದ್ದಾರೆ ಆ ರಿಪೋರ್ಟ್ ಸಭೆಯ ಮುಂದೆ ಬಂದಾಗ ಮಾತನಾಡಬೇಕೇ ಹೊರತು ಈ ರೀತಿ ರೂಲ್ಸ್‌ಗೆ ವಿರುದ್ಧವಾಗಿ ಮಾತನಾಡುವುದು ಸರಿಯಲ್ಲ.

Declaring Sanivarsanthe-Khushalnagar as Notified Areas.

ಶ್ರೀ ಹೆಚ್. ಡಿ. ದೇವೇಗೌಡ.—ಪೌರಾಡಳಿತ ಸಚಿವರಲ್ಲಿ ಒಂದು ವಿಷಯವನ್ನು ಇಂದು ಪ್ರಸ್ತಾಪ ಮಾಡುವುದಕ್ಕೆ ತಾವು ನನಗೆ ಮೊನ್ನೆದಿವಸ ಅನುಮತಿ ಕೊಟ್ಟಿದ್ದೀರಿ. ಅದರ ಪ್ರಕಾರ ತಮ್ಮ ಅಪ್ಪಣೆ ಪಡೆದು ಅವರನ್ನು ಒಂದು ವಿಷಯ ಕೇಳುತ್ತಿದ್ದೇನೆ. ಕೂರ್ಗ್ ಜಿಲ್ಲೆಯ ಶನಿವಾರಸಂತೆ ಮತ್ತು ಕಂಶಾಲನಗರ ಪುರಸಭೆಗಳು ಅಂದು ಇದ್ದ ಕೂರ್ಗ್ ಕಾನೂನಿನ ಚೌಕಟ್ಟಿನಲ್ಲಿ ಒಳಪಟ್ಟಿವೆ. ಇವೆರಡೂ ನೋಟಿಫೈಡ್ ಏರಿಯಾಗಳು. ಈ ಪುರಸಭೆಗಳಿಗೆ ೧೯೬೯ರಲ್ಲಿ ಚುನಾವಣೆ ನಡೆಯಿತು.

ಶ್ರೀ ಬಿ. ಶಿವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಅದರ ಬಗ್ಗೆ ಕಾಲಿಂಗ್ ಅಟೆಂಷನ್ ನೋಟೀಸ್ ಕೊಟ್ಟಿದ್ದೀರಿ. ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕಾಲಿಂಗ್ ಅಟೆಂಷನ್ ನೋಟಿಸನ್ನು ಇದರ ಬಗ್ಗೆ ಕೊಟ್ಟಿಲ್ಲ. ಆದರೂ ತಾವು ಆ ಬಗ್ಗೆ ನಾಳೆ ಉತ್ತರ ಕೊಡುವುದಾದರೆ ನನ್ನ ಅಭ್ಯಂತರವಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ಶನಿವಾರಸಂತೆಯ ಪುರಸಭೆಯ ವಿಚಾರದಲ್ಲಿ ಮಾನ್ಯ ಸಚಿವರು ನಡೆದುಕೊಂಡಿರುವ ಬಗ್ಗೆ ಗುರುತರವಾದ ಆಪಾದನೆ ಇದೆ. ಹೈಕೋರ್ಟಿನವರು ಸ್ಟೇ ಕೊಟ್ಟರೂ ಸಹ ಮಾನ್ಯ ಸಚಿವರು ತಮ್ಮ ಇಷ್ಟಬಂದಂತೆ ನಡೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ಇಂದೇ ಒಂದು ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

Affairs at Mudigere.

ಶ್ರೀ ಕೋಣಂದೂರು ಲಿಂಗಪ್ಪ.—ರೂಲ್ ೩೧೨ರ ಪ್ರಕಾರ ನಾನು ೩-೪ ದಿವಸಗಳ ಹಿಂದೆ ಒಂದು ನೋಟಿಸ್ ಕಳುಹಿಸಿಕೊಟ್ಟಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಪರಿಸ್ಥಿತಿ ಪ್ರಕೋಪಕ್ಕೆ ಹೋಗಿದೆ. ಆ ಬಗ್ಗೆ ಗೃಹಮಂತ್ರಿಗಳು ಜಾಗ್ರತೆ ಉತ್ತರ ತರಿಸಬೇಕು.